ಮುಂತಾದವುಗಳ ಆದಾಯ ನಿಯಮಕ್ಕಿಂತ ಹೆಚ್ಚಾಗಿದ್ದರೂ ಸಹ ಮುಜರಾಯಿ ಇಲಾಖೆಗೆ ಸೇರ್ಪಡೆಗೊಳಿಸದೇ ಇರಲು ಕಾರಣವೇನು?

ಇ) ಈ ರೀತಿ ನಿಯಮಕ್ಕಿಂತ ಹೆಚ್ಚವರಿ ಆದಾಯವಿರುವ ದೇವಾಲಯಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು)

ಅ) ಶ್ರೀ ಕೊಲ್ಲೂರು ಮೂಕಾಂಬಿಕಾ ಮತ್ತು ಶ್ರೀ ಶ್ರೀಕಂಠೇಶ್ವರ ನಂಜನಗೂಡು ಹಾಗೂ ಶ್ರೀ ಚಾಮುಂಡೇಶ್ವರಿ ದೇವಾಲಯ ಹಾಗೂ ಶ್ರೀ ಬನಶಂಕರಿ ದೇವಾಲಯಗಳ 2002–03ನೇ ಸಾಲಿನ ವಾರ್ಷಿಕ ಆದಾಯ ಮತ್ತು ವೆಚ್ಚದ ವಿವರ ಈ ಕೆಳಕಂಡಂತಿದೆ.

1) ಮೂಕಾಂಬಿಕಾ ದೇವಾಲಯ ಕೊಲ್ಲೂರು
ಆದಾಯ : 6,93,47,067–00
ವೆಚ್ಚ : 4.83.98,787–00

2) ಶ್ರೀ ಶ್ರೀಕಂಠೇಶ್ವರ ದೇವಾಲಯ, ನಂಜನಗೂಡು
ಆದಾಯ : 2,83,82,049–00
ವೆಚ್ಚ : 2,68,31,749–00

3) ಶ್ರೀ ಬನಶಂಕರಿ ದೇವಾಲಯ, ಬೆಂಗಳೂರು
ಆದಾಯ : 2,06,62,144–00
ವೆಚ್ಚ : 1,65,02,092–00

4) ಶ್ರೀ ಚಾಮುಂಡೇಶ್ವರಿ ದೇವಾಲಯ,
ಆದಾಯ : 2,09,12,539–00
ವೆಚ್ಚ : 1,02,08,210–00

ಆ) ಶ್ರೀ ಧರ್ಮರಾಯ ಸ್ವಾಮಿ ದೇವಾಲಯವು ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿರುತ್ತದೆ. ಶ್ರೀ ಅಣ್ಣಮ್ಮ ದೇವಾಲಯದ ಆಡಳಿತವನ್ನು ದಿನಾಂಕ:10–5–2002 ರಂದು ಸರ್ಕಾರದ ವಶಕ್ಕೆ ತೆಗೆದುಕೊಂಡಿರುವ ಆದೇಶಕ್ಕೆ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:22972:02 6ರಲ್ಲಿ ತಡೆಯಾಜ್ಞೆ ನೀಡಿರುತ್ತದೆ.

ಇ) ದಿನಾಂಕ : 1–5–2003ರಿಂದ ಜಾರಿಗೆ ಬಂದಿರುವ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಅಧ್ಯಾಯ 8ರಲ್ಲಿ ಸೆಕ್ಷನ್ 42,43ರ ಪ್ರಕಾರ ಖಾಸಗಿ ದೇವಾಲಯಗಳಲ್ಲಿ ಹಣ ದುರುಪಯೋಗವಾದಲ್ಲಿ ಅಂತಹ ದೇವಾಲಯಗಳನ್ನು ಘೋಷಿತ ದೇವಾಲಯ (Dealared institutions) ಎಂದು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಅವಕಾಶ ಇರುತ್ತದೆ.

ಮೈಸೂರು ಜಿಲ್ಲೆಯಲ್ಲಿ ಪರಿಸರ ಸಂರಕ್ಷಣೆ

3291 (3799) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ವಾರ್ತಾ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪರಿಸರ ಸಂರಕ್ಷಣೆ ಸಲುವಾಗಿ ನಿಗದಿ ಪಡಿಸಿರುವ ಅನುದಾನ ಎಷ್ಟು? ಈ ಉದ್ದೇಶಕ್ಕೆ ಲಭ್ಯವಾಗುವ ಬಾಹ್ಯ ನೆರವಿನ ಮೊತ್ತ ಎಷ್ಟು?

ಆ) ಹೊರ ದೇಶಗಳಿಂದ ನೀಡಲಾಗಿರುವ ಪರಿಸರ ಪರೀಕ್ಷಾ ಉಪಕರಣಗಳನ್ನು ಎಲ್ಲಿ ಸ್ಥಾಪಿಸಲಾಗಿದೆ: ಎಲ್ಲವನ್ನು ಸ್ಥಾಪಿಸಲಾಗಿದೆಯೆ: ಅಥವಾ ಸ್ಥಾಪಿಸಲಾಗದ ಪ್ರಕರಣಗಳು ಎಷ್ಟು ಅವು ಯಾವುವು:

ಇ) ಮೈಸೂರು ಜಿಲ್ಲೆಗೆ ಹಾಗೂ ಮೈಸೂರು ತಾಲ್ಲೂಕಿಗೆ ಸಿಮಿತವಾಗುವ ಎಷ್ಟು ಪ್ರಕರಣಗಳನ್ನು ಪರಿಸರ ಕಾನೂನು ಉಲ್ಲಂಘನೆಗೆ ನೋಂದಾಯಿಸಲಾಗಿದೆ: ಎಷ್ಟು ಪ್ರಕರಣಗಳಲ್ಲಿ ದಂಡ ಅಥವಾ ಶಿಕ್ಷೆ ವಿಧಿಸಲಾಗಿದೆ: ವಸೂಲಿ ಮಾಡಿದ ದಂಡವೆಷ್ಟು:

ಈ) ವಾಯು, ನೀರು ಮತ್ತು ಶಬ್ದ ಮಾಲಿನ್ಯ ತಡೆಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಅಲ್ಲಂ ವೀರಭದ್ರಪ್ಪ (ವಾರ್ತಾ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

ಅ) ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ನಿಗಧಿಪಡಿಸಲಾಗಿರುವ ಬಜೆಟ್ ಹಣವನ್ನು ಪರಿಸರ ಸಂರಕ್ಷಣೆಗಾಗಿ ಒದಗಿಸಲಾಗಿರುತ್ತದೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವಿಶ್ವಬ್ಯಾಂಕ್‌ನಿಂದ ರೂ. 1558.90 ಲಕ್ಷಗಳಷ್ಟು ಬಾಹ್ಯ ನೆರವನ್ನು ಅನುದಾನವಾಗಿ ಪಡೆದಿರುತ್ತದೆ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯು ನಾರ್ವೇಜಿಯನ್ ಅನುದಾನವಾಗಿ ಹೊಸತರವಾದ ಪರಿಸರ ಯೋಜನೆಗಳಿಗೆ ರೂ. 21.8 ಕೋಟಿಗಳ ಸಹಾಯ ಪಡೆದಿರುತ್ತದೆ.

ಆ) ಹೌದು

ಪರಿಸರ ಮೇಲ್ವಚಾರಣಾ ಉಪಕರಣಗಳನ್ನು ಈ ಕೆಳಗಿನ ಕಡೆಗಳಲ್ಲಿ ಸ್ಥಾಪಿಸಲಾಗಿದೆ.

ಕೇಂದ್ರ ಪ್ರಯೋಗಾಲಯ, ಬೆಂಗಳೂರು

ಮೈಸೂರು, ಧಾರವಾಡ, ದಾವಣಗೆರೆ, ರಾಯಚೂರು, ಮಂಗಳೂರು ಮತ್ತು ಹಾಸನದಲ್ಲಿನ ಪ್ರಾದೇಶಿಕ ಪ್ರಯೋಗಾಲಯ

ಸಂಚಾರಿ ಪ್ರಯೋಗಾಲಯ

ಎಲ್ಲಾ ಉಪಕರಣಗಳನ್ನು ಸ್ಥಾಪಿಸಲಾಗಿದೆ.

ಇ) ಮೈಸೂರು ಪ್ರಾದೇಶಿಕ ಕಛೇರಿಯಿಂದ ಇಲ್ಲಿಯವರೆಗೆ 18 ಕ್ರಿಮಿನಲ್ ಮೊಕದ್ದಮೆಗಳನ್ನು ಸಂಬಂಧ ಪಟ್ಟ ನ್ಯಾಯಾಲಯಗಳಲ್ಲಿ ಹೂಡಲಾಗಿರುತ್ತದೆ. ಇವುಗಳ ಪೈಕಿ 9 ಪ್ರಕರಣಗಳಲ್ಲಿ ತೀರ್ಪು ಮಂಡಳಿಯ ಪರವಾಗಿರುತ್ತದೆ. ಈ ಯಾವುದೇ ಪ್ರಕರಣದಲ್ಲಿ ನ್ಯಾಯಾಲಯವು ದಂಡ ವಿಧಿಸಿರುವುದಿಲ್ಲ. ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ನ್ಯಾಯಾಲಯ ತೀರ್ಪನ್ನು ನೀಡಿ ಕಾರ್ಖಾನೆ ವ್ಯವಸ್ಥಾಪಕರು ಮತ್ತು ಅಧಿಕಾರಿಗಳಿಗೆ 5,000–00 ರೂ.ಗಳ ದಂಡವನ್ನು ಹಾಗೂ 2 ವರ್ಷಗಳ ಸಜೆಯನ್ನು ವಿಧಿಸಿರುತ್ತದೆ. ಇನ್ನುಳಿದ 8 ಪ್ರಕರಣಗಳು ಇನ್ನು ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುತ್ತವೆ.

ಈ) ಜಲಕಾಯ್ದೆ, ವಾಯುಕಾಯ್ದೆ ಮತ್ತು ಪರಿಸರ (ಸಂರಕ್ಷಣೆ) ಕಾಯ್ದೆಗಳ ಅಡಿಯಲ್ಲಿನ ಅವಕಾಶಗಳ ಅನ್ವಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಉಲ್ಲಂಘನೆ ಪ್ರಕರಣಗಳು

3292 (3800) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?